ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತೆರಡನೆಯ ಅಧಿವೇಶನ
ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಖಾಸಗಿ ವ್ಯಕ್ತಿಗಳ ವಾಹನ ಪ್ರವೇಶವನ್ನು ನಿರ್ಬಂಧಿಸುವ ಬಗ್ಗೆ

ಶ್ರೀ ಎನ್. ರವಿಕುಮಾರ್(ವಿಧಾನಸಭೆಯಿಂದ ಚುನಾಯಿತರಾದವರು) –

395 (239) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಖಾಸಗಿ ವ್ಯಕ್ತಿಗಳಿಗೆ ವಿಧಾನ ಸೌಧ ಪ್ರವೇಶಿಸಲು ಅನುವಾಗುವಂತೆ ವಾಹನ ಪಾಸುಗಳನ್ನು ನೀಡಲು ಯಾರು ಶಿಫಾರಸು ಮಾಡಿರುತ್ತಾರೆ; ದಿನಾಂಕ:24.09.2020 ರ ಪ್ರಶ್ನೆ ಸಂಖ್ಯೆ 652 ಕ್ಕೆ ನೀಡಿದ ಉತ್ತರದಲ್ಲಿ ತಿಳಿಸಿದಂತೆ 296 ಖಾಸಗಿ ವ್ಯಕ್ತಿಗಳಿಗೆ ಪಾಸು ನೀಡಲು ಶಿಫಾರಸ್ಸು ಮಾಡಿದವರ ಹೆಸರು ಮತ್ತು ದೂರವಾಣಿ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು; ಯಾವ ಕಾರಣಗಳಿಗೆ ಖಾಸಗಿ ವ್ಯಕ್ತಿಗಳಿಗೆ ವಾಹನ ಪಾಸುಗಳನ್ನು ನೀಡಲಾಗಿದೆ;

(ಆ) ಖಾಸಗಿ ವ್ಯಕ್ತಿಗಳಿಗೆ ಎಷ್ಟು ಅವಧಿಯ ಪಾಸು ನೀಡಲಾಗುತ್ತದೆ; ಅದಕ್ಕೆ ಕಾರಣಗಳೇನು; ಖಾಸಗಿ ವ್ಯಕ್ತಿಗಳು ತಮ್ಮ ವಾಹನದಲ್ಲಿ ದಿನ ಪ್ರತಿ ವಿಧಾನ ಸೌಧಕ್ಕೆ ಬರುತ್ತಾರೆಯೇ; ಸೀಮಿತ ಅವಧಿಯ ಪಾಸುಗಳನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು;

(ಇ) ಖಾಸಗಿ ವ್ಯಕ್ತಿಗಳು ರಾಜ್ಯದ ಶಕ್ತಿ ಕೇಂದ್ರಕ್ಕೆ ತಮ್ಮ ಸ್ವಂತ ವಾಹನದಲ್ಲಿ ಪ್ರವೇಶಿಸಿ ನಿಲುಗಡೆಗೊಳಿಸುತ್ತಿದ್ದು ಇದು ವಿಧಾನ ಸೌಧ ಮತ್ತು ಮುಖ್ಯಮಂತ್ರಿ ಹಾಗೂ ಸಚಿವರುಗಳ ಭದ್ರತೆಗೆ ಧಕ್ಕೆಯುಂಟು ಮಾಡಿದಂತಾಗಲಿಲ್ಲವೆ; ಈ ರೀತಿಯಾಗಿ ಖಾಸಗಿ ವ್ಯಕ್ತಿಗಳಿಗೆ ವಾಹನ ಪಾಸು ನೀಡುವ ಸಮಯದಲ್ಲಿ ಪೊಲೀಸ್ ವೆರಿಫಿಕೇಶನ್ ಮಾಡಲಾಗುತ್ತಿದೆಯೇ; ಈ ಕುರಿತು ಸರ್ಕಾರದ ನಿಲುವೇನು;

(ಈ) ಈ ರೀತಿಯಾಗಿ ಖಾಸಗಿ ವ್ಯಕ್ತಿಗಳಿಗೆ ವಾಹನ ಪಾಸುಗಳನ್ನು ಪಡೆದುಕೊಂಡಿರುವ ವ್ಯಕ್ತಿಗಳಿಂದ ಮುಖ್ಯಮಂತ್ರಿ ಹಾಗೂ ಮಂತ್ರಿಗಳ ಭದ್ರತೆಗೆ ಧಕ್ಕೆಯುಂಟಾದಲ್ಲಿ ಪಾಸು ನೀಡಿದ ಶಾಖೆಯ ಶಾಖಾಧೀಕ್ಷಕರು, ಉಪ ಕಾರ್ಯದರ್ಶಿಯವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ; ಈ ಕುರಿತು ಸರಕಾರದ ನಿಲುವೇನು?